205 ( 1249)

ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಸಾಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಸೀತಾನದಿ ಎಂಬಲ್ಲಿಗೆ ಮಿನಿ ವಿದ್ಯುತ್ ಸ್ಥಾವರ ಮಂಜೂರು ಮಾಡಿರುವುದು ನಿಜವೆ?

ಆ) ಈ ವಿದ್ಯುತ್ ಸ್ಥಾವರದಿಂದ ಎಷ್ಟು ಖಾಸಗಿ ಭೂಮಿ ಮತ್ತು ಎಷ್ಟು ಸರ್ಕಾರಿ ಭೂಮಿ ಮುಳುಗಡೆಯಾಗಲಿದೆ?

ಇ) ಮುಳುಗಡೆಯಾಗಿರುವ ಖಾಸಗಿ ಜಮೀನಿನ ಮಾಲೀಕರಿಗೆ ಸರ್ಕಾರದವರು ಎಷ್ಟು ಹಣವನ್ನು ಪರಿಹಾರ ರೂಪದಲ್ಲಿ ನೀಡಲು ಉದ್ದೇಶಿಸಿದ್ದಾರೆ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಸಾಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) (ಅ) ಮತ್ತು (ಇ) ಖಾಸಗಿ ಸಂಸ್ಥೆಯವರು ಸರ್ವೆಕಾರ್ಯ ಮಾಡಿರದ ಕಾರಣ ಮುಳುಗಡೆಯಾಗುವ ಭೂಮಿಯ ಬಗ್ಗೆ ಮಾಹಿತಿ ಇರುವುದಿಲ್ಲ. ಆದಕಾರಣ ಪರಿಹಾರ ಹಣವನ್ನು ನೀಡುವ ಮಾಹಿತಿಯು ಇರುವುದಿಲ್ಲ.

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ: ಮಾನ್ಯ ಉಪಾಧ್ಯಕ್ಷರೇ, ನಾನು ಕಾರ್ಕಳ ತಾಲ್ಲೂಕಿನ ಸೀತಾನದಿ ಎಂಬಲ್ಲಿಗೆ ಮಿನಿ ವಿದ್ಯುತ್ ಸ್ಥಾವರ ಮಂಜೂರು ಮಾಡಿರುವುದು ನಿಜವೇ ಎಂದು ಕೇಳಿರುವುದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಇನ್ನು 2ನೇ ಪ್ರಶ್ನೆ ಈ ವಿದ್ಯುತ್ ಸ್ಥಾವರದಿಂದ ಎಷ್ಟು ಖಾಸಗಿ ಭೂಮಿ ಮತ್ತು ಎಷ್ಟು ಸರ್ಕಾರಿ ಭೂಮಿ ಮುಳುಗಡೆಯಾಗಲಿದೆ? ಎಂದು ಕೇಳಿರುವುದಕ್ಕೆ ಏನು ಉತ್ತರ ಕೊಟ್ಟಿದ್ದಾರೆಂದರೆ ''ಖಾಸಗಿ ಸಂಸ್ಥೆಯವರು ಸರ್ವೇಕಾರ್ಯ ಮಾಡಿರದ ಕಾರಣ ಮುಳುಗಡೆಯಾಗುವ ಭೂಮಿಯ ಬಗ್ಗೆ ಮಾಹಿತಿ ಇರುವುದಿಲ್ಲ. ಆದಕಾರಣ ಪರಿಹಾರ ಹಣವನ್ನು ನೀಡುವ ಮಾಹಿತಿಯು ಇರುವುದಿಲ್ಲ'' ಎಂದು ತಿಳಿಸಿದ್ದಾರೆ. ಈ ಯೋಜನೆ ಮಂಜೂರಾತಿ ಆದಾಗ ಎಷ್ಟು ಖಾಸಗಿ ಸ್ಥಳ, ಎಷ್ಟು ಸರ್ಕಾರ ಸ್ಥಳ ಮುಳುಗಡೆಯಾಗುತ್ತದೆ ಎನ್ನುವಂತಹ ಕನಿಷ್ಟ ವಿಚಾರಗಳು ಈ ಇಲಾಖೆಗೆ ಗೊತ್ತಿರಬೇಕಾಗುತ್ತದೆ. ಅದು ತಮಗೆ ಗೊತ್ತಿಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಆ ವಿದ್ಯುತ್ ಸ್ಥಾವರ ಮಂಜೂರು ಮಾಡಿರುತ್ತೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದೀರಿ. ಅಲ್ಲಿ ಪರಿಹಾರ ಏನು ಕೊಡುತ್ತೀರಿ ಎಂದು ತಮಗೆ ಗೊತ್ತಿಲ್ಲ. ಯಾವ ಸ್ಥಳ ಮುಳುಗಡೆಯಾಗುತ್ತದೆ

ಎಂಬುದು ತಮಗೆ ಗೊತ್ತಿಲ್ಲ. ಖಾಸಗಿ ಭೂಮಿ ಎಷ್ಟು? ಅರಣ್ಯ ಭೂಮಿ ಎಷ್ಟು ಮುಳುಗಡೆಯಾಗುತ್ತದೆಂಬುದು ಗೊತ್ತಿಲ್ಲ. ಇಷ್ಟು ವಿಚಾರಗಳನ್ನು ಇಟ್ಟುಕೊಂಡು ಮಾಹಿತಿ ಇಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಆ ಕಾರಣಕ್ಕೆ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ನೀವು ಪ್ರಶ್ನೆ ಕೇಳಿ. ನಿಮಗೆ ಏನು ಬೇಕಾಗಿದೆ ಅದನ್ನು ಕೇಳಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ. ಸೀತಾ ನದಿಗೆ ಮಿನಿ ವಿದ್ಯುತ್ ಸ್ಥಾವರ ಸ್ಯಾಂಕ್ಷನ್ ಮಾಡಿದ್ದೇವೆ. ಅದನ್ನು ಸ್ಯಾಂಕ್ಷನ್ ಮಾಡಿದಮೇಲೆ ಅಲ್ಲಿ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎನ್ನುವುದು ಅದನ್ನು ಸರ್ವೇ ಮಾಡಿದಮೇಲೆ ಎಲ್ಲಾ ಡಿಟ್ಟೈಲ್ಸ್ ಬರುತ್ತದೆ. ಅದನ್ನು ಸರ್ವೇ ಮಾಡಿದಮೇಲೆ ಡಿಟ್ಟೈಲ್ಸ್ ಬಂದಮೇಲೆ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಅದರ ಮೇಲೆ ಕಾಂಪನ್ಸೇಷನ್ ಫಿಕ್ಸ್ ಮಾಡುತ್ತೇವೆ. ಮಾನ್ಯ ಸದಸ್ಯರು ಎಷ್ಟು ಜಮೀನು ಮುಳುಗಡೆಯಾಗುತ್ತದೆ? ಎಷ್ಟು ಕಾಂಪನ್ಸೇಷನ್ ಕೊಡುತ್ತೀರೆಂದು ಕೇಳಿದರು. ಜಮೀನು ಮುಳುಗಡೆಯಾಗತಕ್ಕಂಥ ಪ್ರದೇಶದ ಬಗ್ಗೆ ನಮಗೆ ಮಾಹಿತಿ ಬಂದಿಲ್ಲ. ಇನ್ನು ಸರ್ವೇಯಾಗಿಲ್ಲ. ಸರ್ವೇ ಮಾಡಿದಮೇಲೆ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಅದರ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಸರ್ವೇ ಮಾಡಿದ ಮೇಲೆ ನಮಗೆ ಗೊತ್ತಾಗುತ್ತದೆ. ಮತ್ತು ಅದರಲ್ಲಿ ಯಾವ ತರಹದ ಭೂಮಿಗಳು ಬರುತ್ತವೆ ಅದನ್ನು ನೋಡಿಕೊಂಡು ಕಾಂಪನ್ಸೇಷನ್ ಫಿಕ್ಸ್ ಮಾಡುತ್ತೇವೆ.

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ: ಮಾನ್ಯ ಉಪಾಧ್ಯಕ್ಷರೇ, ಉತ್ತರ ಕೊಡುವಾಗ ತಪ್ಪಾಗಿದೆ. ತಪ್ಪಾಗಿರತಕ್ಕಂಥ ಉತ್ತರವನ್ನು ಸಮರ್ಥನೆ ಮಾಡುವುದಕ್ಕೆ ಹೋಗಬೇಡಿ. ನಾನು ಹೇಳುವುದು ಕೇಳಿ. ಯಾವುದೇ ಯೋಜನೆಯನ್ನು ಪ್ರಾರಂಭ ಮಾಡುವ ಮೊದಲು ಅಲ್ಲಿ ಜಮೀನು ಎಷ್ಟು ಮುಳುಗಡೆಯಾಗುತ್ತದೆ, ಎಷ್ಟು ಖಾಸಗಿ ಜಮೀನು ಎಷ್ಟು ಸರ್ಕಾರಿ ಜಮೀನು ಮುಳುಗಡೆಯಾಗುತ್ತದೆ? ಎಷ್ಟು ವಿದ್ಯುತ್ ಉತ್ಪಾದನೆ ಆಗುತ್ತದೆ ಎನ್ನುವ ಕನಿಷ್ಟ ಮಾಹಿತಿ ಇಲ್ಲ; ನೀವು ಮಂಜೂರು ಮಾಡಿದ್ದೀರಿ. ಇಷ್ಟು ಭೂಮಿ ಮುಳುಗಡೆಯಾಗುತ್ತದೆ ಎನ್ನುವ ಕನಿಷ್ಟ ಮಾಹಿತಿ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ನೀವು ಕೊಟ್ಟಿರತಕ್ಕಂಥ ಉತ್ತರವನ್ನು ಸರಿಯಿದೆ ಎನ್ನುವಂತಹ ವಾದ ಮಾಡುತ್ತಿದ್ದೀರಿ. ಅದಕ್ಕೆ ನಾನು ಹೇಳಿದೆ, ಯಾವುದೇ ಯೋಜನೆ ಮಂಜೂರು ಮಾಡುವುದಕ್ಕೆ ಮೊದಲು ಸ್ವಲ್ಪ ಆಲೋಚನೆ ಮಾಡಿ ಮಂಜೂರು ಮಾಡಬೇಕು. ತಾವು ಆಲೋಚನೆ ಮಾಡಿ ಮಾಡುತ್ತೀರಾ ಅಥವಾ ಮಾಡಿ ಆಲೋಚನೆ ಮಾಡುತ್ತೀರಾ? ನೀವು ಇದಕ್ಕೆ ಉತ್ತರ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ: ನಾವು ಕೆಲಸ ಪ್ರಾರಂಭ ಮಾಡಬೇಕಾದರೆ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಏನು ಎಂದು ಸಂಪೂರ್ಣವಾಗಿ ಮಾಹಿತಿ ಸಿಗುವುದಿಲ್ಲ. ನಾವು ಇನ್ನು ಕೆಲಸ ಪ್ರಾರಂಭ ಮಾಡಿಲ್ಲ. ಇನ್ನು ಅಲ್ಲಿ ಸರ್ವೇ ಕೂಡ

ಆಗಿಲ್ಲ. ಸುಮ್ಮನೆ ರಫ್ ಆಗಿ 2 ಮೆಗಾವ್ಯಾಟ್ 3 ಮೆಗಾವ್ಯಾಟ್ ಜನರೇಟ್ ಆಗುತ್ತದೆಂದು ಕ್ಯಾಲುಕಲೇಷನ್ ಇದೆ. ಅದರ ಪ್ರಕಾರ ಮಂಜೂರಾತಿ ಕೊಡುತ್ತೇವೆ. ಅದಾದಮೇಲೆ ಡೀಟೈಲಾಗಿ ಎಸ್ಟಿಮೇಟ್ ಆಗಿ ಸರ್ವೇ ಕೆಲಸವಾಗುತ್ತದೆ. ಇದಾದಮೇಲೆ ಎಷ್ಟು ನಾವು ಉತ್ಪಾದನೆ ಮಾಡವುದು? ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎನ್ನುವುದು ಸರ್ವೇ ನಂತರ ಗೊತ್ತಾಗುತ್ತದೆ. ಸರ್ವೇ ಆದಮೇಲೆ ಇಷ್ಟು ಭೂಮಿ ಮುಳುಗಡೆಯಾಗುತ್ತದೆಂದು ಬಂದಮೇಲೆ, ಅದು ಯಾವರೀತಿ ಭೂಮಿ ಎಂದು ತಿಳಿದುಕೊಂಡು ಅದಕ್ಕೆ ಕಾಂಪನ್ಸೇಷನ್ ಫಿಕ್ಸ್ ಮಾಡುತ್ತೇವೆ. ಕ್ಲಿಯರ್ ಆಗಿ ನಾವು ಎಲ್ಲಾ ಕೊಟ್ಟಿದ್ದು. ಇನ್ನು ಸರ್ವೇ ವರ್ಕ್ ಆಗಿಲ್ಲ. ಇನ್ನು ಕಾಂಪನ್ಸೇಷನ್ ಫಿಕ್ಸ್ ಮಾಡಿಲ್ಲ. ಇದಕ್ಕೆ ಸಮರ್ಪಕ ಉತ್ತರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ: ಮಾನ್ಯ ಉಪಾಧ್ಯಕ್ಷರೇ, ಅದಕ್ಕೆ ನಾನು ತಮಗೆ ಉತ್ತರ ಬಂದಿದೆಯಾ ಎಂದು ಕೇಳಿದ್ದು. ಏಕೆಂದರೆ ಯಾವುದೇ ಯೋಜನೆ ಮಂಜೂರು ಮಾಡುವ ಮೊದಲು ಲೈನ್ ಎಸ್ಟಿಮೇಟ್ ಆಗಿರಬೇಕು. ಸರ್ವೇ ಆಗಿರಬೇಕು. ಅಂದಾಜು ಮುಳುಗಡೆಯಾಗತಕ್ಕಂಥ ಪ್ರದೇಶವನ್ನು ....

ಉಪಾಧ್ಯಕ್ಷರು: ಈಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ವೇ ಅಲ್ಲಿ ಮಾಡಿಲ್ಲ ಸರ್ವೆ ಮಾಡಿದಮೇಲೆ ಗೊತ್ತಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ: ನಂತರ ನಾವು ಕೆಲಸ ಪ್ರಾರಂಭ ಮಾಡುವುದು. ಅಲ್ಲಿಯತನಕ ಕೆಲಸ ಪ್ರಾರಂಭ ಮಾಡುವ ಪ್ರಶ್ನೇನೇ ಬರುವುದಿಲ್ಲ.

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ: ನಾನು ಹೇಳತಕ್ಕಂಥಾದ್ದು, ಯಾವುದೇ ಯೋಜನೆ ಮಂಜೂರು ಮಾಡುವ ಮೊದಲು ಒಂದು ಸರ್ವೇ ಮಾಡಿ ಫೀಜಿಬಿಲಿಟಿ ನೋಡಿ ಅದರ ಒಳಿತು ಕೆಡುಕನ್ನು ನೋಡಿ ಮಂಜೂರು ಮಾಡುವುದು ಒಂದು ಕ್ರಮ. ಎಷ್ಟು ಖಾಸಗಿ ಜಮೀನು, ಎಷ್ಟು ಸರ್ಕಾರಿ ಜಮೀನು? ಎಷ್ಟು ಅರಣ್ಯ ಜಮೀನು ಹೋಗುತ್ತದೆಂದು ಕನಿಷ್ಟ ಮಾಹಿತಿ ತಮ್ಮ ಹತ್ತಿರ ಇರಬೇಕಾಗುತ್ತದೆ. ಆ ಯಾವ ಮಾಹಿತಿಯೂ ಇಲ್ಲದೆ ಮಂಜೂರು ಮಾಡಿದ್ದಾರೆ. ನನ್ನ ಹತ್ತಿರ ಮಾಹಿತಿ ಇಲ್ಲವೆಂದು ಉತ್ತರ ಕೊಡುವುದು ಎಷ್ಟು ಸರಿಯೆಂದು ಕೇಳುತ್ತಿದ್ದೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ: ಮಾನ್ಯ ಉಪಾಧ್ಯಕ್ಷರೇ, ಇದು ಸಣ್ಣಸಣ್ಣ ಪ್ರಾಜೆಕ್ಟ್. ನೀರು ಏನು ಹರಿಯುತ್ತಿರುತ್ತದೆ ಅದರ ಪ್ರಕಾರ ಇಷ್ಟು ಜನರೇಟ್ ಆಗುವುದಕ್ಕೆ ಸಾಧ್ಯವಿದೆ ಎಂದು ನೋಡಿ ಅದನ್ನು ಸ್ಯಾಂಕ್ಷನ್ ಮಾಡಿಬಿಟ್ಟು, ನಂತರ ಅದರ ಬಗ್ಗೆ ಡೀಟೈಲ್ ಎಸ್ಟಿಮೇಟ್ ಆಗುತ್ತದೆ. ಡೀಟೈಲ್ ಎಸ್ಟಿಮೇಟ್ ಆದಮೇಲೆ ಸರ್ವೆ ಕೆಲಸ ಪೂರ್ತಿಯಾಗುತ್ತದೆ. ಒಂದೊಂದು ಸಲ 3 ಮೆಗಾವ್ಯಾಟ್ ಆಗುತ್ತದೆಂದು ಕೊಟ್ಟಿರುತ್ತಾರೆ. ಆದರೆ ಒಂದು ಮೆಗಾವ್ಯಾಟ್ ಕೂಡ ಬರುವುದಿಲ್ಲ. ನಾವು

ಒಂದೊಂದು ಸಾರಿ 3 ಮೆ.ವ್ಯಾ. ವಿದ್ಯುತ್ ಆಗುತ್ತದೆಂದು ಪರ್ಮಿಷನ್ ಕೊಟ್ಟಿರುತ್ತೇವೆ. ಆದರೆ ಒಂದು ಮೆ.ವ್ಯಾ. ಕೂಡ ಬರುವುದಿಲ್ಲ. ನಮ್ಮ ಶಹಾಪುರ ಬ್ರಾಂಚಿನಲ್ಲಿ 1.3 ಮೆ.ವ್ಯಾ. ವಿದ್ಯುತ್ ಬರುತ್ತದೆಂದು ಕೊಟ್ಟಿದ್ದು, ಆದರೆ ಅದರಲ್ಲಿ 750 ಕಿ.ವ್ಯಾ. ಬರುತ್ತಿದೆ. ಇದು ಡಿಪೆಂಡ್ ಆನ್ ವಾಟರ್ ಫ್ಲೊಯಿಂಗ್‌ನಿಂದ ಬರುತ್ತದೆ. ಆದುದರಿಂದ ಈಗ ಸಂಪೂರ್ಣವಾಗಿ ಸರ್ವೆ ಮಾಡಿದ ಮೇಲೆ ನಮಗೆ ಗೊತ್ತಾಗುತ್ತದೆ, ಇಲ್ಲದಿದ್ದರೆ ಎಷ್ಟು ಮುಳುಗಡೆಯಾಗುತ್ತದೆಂಬುದು ಗೊತ್ತಾಗುವುದಿಲ್ಲ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ತಮಗೆ ಈಗ ಅದು ಗೊತ್ತಿಲ್ಲ ಬಿಡಿ, ನೀವು ಸರ್ವೇ ಮಾಡಿಸಿಲ್ಲ, ಸರ್ವೆ ರಿಪೋರ್ಟ್ ಗೊತ್ತಿಲ್ಲ. ಎಷ್ಟು ಮುಳುಗಡೆಯಾಗುತ್ತದೆಂಬುದು ಗೊತ್ತಿಲ್ಲ. ಇದರ ಬಗ್ಗೆ ಅಂದಾಜು ವೆಚ್ಚವೆಷ್ಟು ಎಂಬುದು ಗೊತ್ತಿದೆಯಾ?

ಶ್ರೀ ಶರಣ ಬಸಪ್ಪ ದರ್ಶನಾಪುರ್: ಒಂದು ಮೆಗಾವ್ಯಾಟ್‌ಗೆ ನಾಲ್ಕು ಕೋಟಿ ರೂಪಾಯಿಗಳಾಗುತ್ತವೆ. ಇದಕ್ಕೆ ಇನ್ನೂ ಸರ್ವೆಯಾಗಿಲ್ಲ. ಲ್ಯಾಂಡ್ ಕಾಸ್ಟ್ ಜಾಸ್ತಿಯಾದಾಗ ಇದು ಜಾಸ್ತಿಯಾಗಬೇಕಾಗುತ್ತದೆಂದು ನಾವು ಹೇಳಬೇಕಾಗುತ್ತದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನೀವು ಮಾಡಿರುವಂತಹ ತಪ್ಪನ್ನು ಸಮರ್ಥನೆ ಮಾಡುತ್ತಾ ಇದ್ದರೆ ಹೇಗೆ? ನೀವು ಮಾಡಿರುವಂತಹ ತಪ್ಪನ್ನು ಸಮರ್ಥನೆ ಮಾಡಬಾರದೆಂಬುದು ನನ್ನ ವಾದ.

ಉಪಾಧ್ಯಕ್ಷರೆ: ಈಗ ಈ ಪ್ರಶ್ನೆ ಮುಕ್ತಾಯ ಮಾಡೋಣ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಮಾನ್ಯ ಉಪಾಧ್ಯಕ್ಷರೆ, ಅಂದಾಜು ವೆಚ್ಚವೆಷ್ಟು ಎಂಬುದು ಗೊತ್ತಿಲ್ಲ, ಎಷ್ಟು ಮುಳುಗಡೆಯಾಗಿದೆ ಎಂಬುದು ಗೊತ್ತಿಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ್: ಮಾನ್ಯ ಉಪಾಧ್ಯಕ್ಷರೆ, 1 ಮೆ.ವ್ಯಾಟಿಗೆ 4 ಕೋಟಿ ರೂಪಾಯಿಗಳ ಅಂದಾಜು ಆಗಬಹುದು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, so far as mini Hydel Projects are concerned, skeleton survey has been done. ಎಲ್ಲೆಲ್ಲಿ ನದಿಗಳು ಹರಿಯುತ್ತವೆ, ಅದೆಲ್ಲಾ run of the river ಸ್ಕೀಂಗಳಾಗಿದೆ. ನಾನು ಕೊಡಗು ಜಿಲ್ಲೆಯ ಬಗ್ಗೆ ಹೇಳುವುದಾದರೆ ಇದೇ ರೀತಿಯಾಗಿ ರನ್ ಆಫ್ ದಿ ರಿವರ್ ಸ್ಕೀಂ ಎಂದು ತೆಗೆದುಕೊಂಡಿದ್ದಾರೆ. ಇದೇ ರೀತಿಯಲ್ಲಿ ಸೌತ್ ಕೆನರಾದಲ್ಲಿರುವಂತಹ ಈ ನದಿಗಳಲ್ಲಿ ಸೀತಾ ನದಿಗೆ ಸಂಬಂಧಪಟ್ಟ ಹಾಗೆ ಒಂದು ಸ್ಕೆಲಿಟನ್ ಸರ್ವೆ ಮಾಡಿದ್ದಾರೆ. ಇದು ಮಾಡಿದ ಮೇಲೆ ಕೆಲವು ಜಾಗಗಳಲ್ಲಿ ಏಜೆನ್ಸಿಯವರು ನಾವು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತೇವೆ ನಮಗೆ ಕೊಡಿ ಎಂದು ಕೇಳಿದ್ದಾರೆ. ಅದನ್ನು ಅವರಿಗೆ ಕೊಟ್ಟಿದ್ದಾರೆ. ಅದನ್ನು ಕೊಟ್ಟಮೇಲೆ ಕಾಂಪ್ರಹೆನ್ಸೀವ್

ಸರ್ವೆ ಮಾಡಬೇಕಾಗುತ್ತದೆ. ಇಲ್ಲಿ ಸಬ್‌ಮರ್ಷನ್ ಎಂದು ಹೇಳುವಂತಹ ಪರಿಸ್ಥಿತಿ ಬರಕೂಡದು. ಏಕೆಂದರೆ ಬ್ಯಾರೇಜ್ ಫುಟ್ ಆಫ್ ಮಾಡಕೂಡದು. ಬ್ಯಾರೆಜ್ ಫುಟ್ ಆಫ್ ಮಾಡಿದ ಮೇಲೆ ಎಲ್ಲಾದರೂ ಸಬ್‌ಮರ್ಷನ್ ಆಗುವಂಥಾದ್ದು ಇದ್ದರೆ ಅದನ್ನು ಯಾರೂ ಒಪ್ಪುವುದಿಲ್ಲ. ಇದೆಲ್ಲಾ ಸೀಸನಲ್ ಅಂಡ್ ರನ್ ಆಫ್ ದಿ ರಿವರ್ ಸ್ಕೀಂ; on an average per M.Wt., for Hydel projects ಎಂದರೆ 3 ಕೋಟಿ ರೂಪಾಯಿಗಳಿಂದ 4 ಕೋಟಿ ರೂಪಾಯಿಗಳವರೆಗೆ ಇರುವಂಥಾದ್ದು ಎಂದು sketchy estimate ಮಾಡಿದ್ದಾರೆ. ಅದು ಪೂರ್ತಿಯಾಗಿ ಸರ್ವೆ ಮಾಡಿ ಅಲ್ಲಿ ಬ್ಯಾರೇಜ್ ಬೇಕೆ ಅಥವ ಬೇಡವೇ? ಟರ್ಬೈನ್ಸ್ ಯಾವ ಕಡೆ ತೆಗೆದುಕೊಂಡು ಹೋಗಬೇಕೆಂದು ತೀರ್ಮಾನ ಮಾಡಿ ಎಷ್ಟು ಎಕರೆ ಮುಳುಗಡೆಯಾಗುತ್ತದೆಂದು ಹೇಳಿದರೆ ರನ್ ಆಫ್ ದಿ ರಿವರ್ ಸ್ಕೀಂನಲ್ಲಿ ಭೂಮಿ ಮುಳುಗಡೆಯಾಗಬಾರದು. ಫ್ಲಡ್ ಬಂದಿರುವಂತಹ ಡ್ಯಾಮ್‌ಗಳಲ್ಲಿ ಸೀಸನಲ್ ಆಪರೇಟ್ ಮಾಡುವಂಥದ್ದು. ಆದರೆ ಕೆಲವು ಸಂದರ್ಭಗಳಲ್ಲಿ ಎಲ್ಲೋ ಒಂದು ಕಡೆ ಒಂದು ಬ್ಯಾರೇಜ್ ಮಾಡಿ ಟರ್ಬೈನ್ ಅನ್ನು ತೆಗೆದುಕೊಂಡು ಹೋಗಿ ಆ ಪ್ರೊಪೆಲರ್‌ಗೆ ವಾಟರ್ ಅನ್ನು ಬಿಡುವಂತಹ ಕಾರ್ಯಕ್ರಮವನ್ನು ಮಾಡಿಕೊಳ್ಳುತ್ತಾರೆ. ಈ ಸರ್ವೆ ಕೆಲಸವೇ ಇನ್ನು ಪೂರ್ತಿಯಾಗಿಲ್ಲ. ಈ ರೀತಿಯಾಗಿ 10-20 ನದಿಗಳು ಈ ರೀತಿಯಾಗಿ ಇವೆ. ಇವಗಳಲ್ಲಿ 1 ಮೆ.ವ್ಯಾ, 2 ಮೆ.ವ್ಯಾ 3 ಮೆ.ವ್ಯಾ, ಮಾಡುವಂಥಾದ್ದನ್ನು ಈ ರನ್ ಆಫ್ ದಿ ಸ್ಕೀಂನಲ್ಲಿ ಐಡೆಂಟಿಫೈ ಮಾಡಿ ಇದನ್ನು ಏಜೆನ್ಸಿಯವರು ವಿದ್ಯುತ್ ಮಾಡುತ್ತೇವೆಂದು ಯಾರು ಮುಂದೆ ಬಂದಿದ್ದಾರೆ. ಅವರಿಗೆ ನೀವು ಸರ್ವೆ ಮಾಡಿ ಪೂರ್ತಿ ರಿಪೋರ್ಟ್ ಕೊಡಿ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಇದು ಇನ್ನೂ ಪ್ರಿಲಿಮಿನರಿ ಸ್ಟೇಜ್‌ನಲ್ಲಿ ಇದ್ದು ಇನ್ನು ಇದಕ್ಕೆ ಇನ್ನು ಫೈನಲ್ ಆಗಿ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಪೂರ್ತಿ ಡೀಟೈಲ್ ಅನ್ನು we are prepared to give you. As at the moment, this is at the initial stage. ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ ಇದು ಇನ್ನು ಪ್ರಾರಂಭಿಕ ಹಂತವಾಗಿದೆ. ನಿಮ್ಮ ಕ್ಷೇತ್ರದಲ್ಲಿರುವ ಹಾಗೆ ನಮ್ಮಲ್ಲೂ ಇದೇ ಪರಿಸ್ಥಿತಿಯಾಗಿದೆ. ರನ್ ಆಫ್ ದಿ ರಿವರ್ ಸ್ಕೀಂನಲ್ಲಿ ಸಬ್ ಮರ್ಷನ್ ಇರಲೇ ಕೂಡದು ಎಂದು ಹೇಳುವಂಥಾದ್ದೇ ಕಾನ್ಸೆಪ್ಟ್. ಇದೇ ರೀತಿಯಲ್ಲಿ ಲಾಸ್ಟ್ ಟೈಮ್ ಬೇಡ್ತಿ ಯೋಜನೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಬಂತು. ಅಲ್ಲೂ ಕೂಡ ರನ್ ಆಫ್ ದಿ ರಿವರ್ ಸ್ಕೀಂಗೆ ಸಂಬಂಧಪಟ್ಟಹಾಗೆ ಸರ್ವೆಯಾಗಿಲ್ಲವೆಂದು ಮಾನ್ಯ ಮಿತ್ರರಾದಂತಹ ಶ್ರೀ ವಿಶ್ವೇಶ್ವರ ಹೆಗಡೆಯವರಿಗೆ ನಾನು ಹೇಳಿದೆ. ಇದು ರನ್ ಆಫ್ ದಿ ರಿವರ್ ಸ್ಕೀಂ ಸರ್ವೆಯಾಗಬೇಕಾಗುತ್ತದೆ. ಅದಕ್ಕೆ ಸರ್ವೆಯಾಗುವುದಕ್ಕೆ ಬಿಡುವುದಿಲ್ಲವೆಂದರೆ ಆಗುವುದಿಲ್ಲ. ಅದನ್ನು ಸರ್ವೆ ಮಾಡಿ ಎಲ್ಲೂ ಸಬ್‌ಮರ್ಷನ್ ಆಗದೇ ಇರುವಂತಹ ಪರಿಸ್ಥಿತಿಯಾದರೆ 3-4 ಮೆ.ವ್ಯಾ. ವಿದ್ಯುತ್ ಉತ್ಪಾದನೆಯನ್ನು ಮಾಡುವಂಥಾದ್ದಕ್ಕೆ ಅವಕಾಶವಿದ್ದರೆ ಅದನ್ನು ಬೇಡವೆಂದು ಹೇಳುವುದು ಏಕೆ ಎಂಬುದು ಮಾತ್ರ

ಪ್ರಶ್ನೆಯಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ: ನೀವು ಅಂಗೈ ತೋರಿಸಿದರೆ ಮುಂಗೈ ನುಂಗುವವರು ಎಂಬುದು ಗೊತ್ತಿದೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸದಸ್ಯರು ಅಂಗೈ ಕೊಟ್ಟರೆ ಮುಂಗೈ ನುಂಗುವವರು ಎಂದು ಹೇಳುತ್ತಾರೆ. ಒಂದು ಕಡೆ ವಿದ್ಯುತ್ ಇಲ್ಲವೆಂದು ದೊಡ್ಡ ಪ್ರತಿಭಟನೆಯನ್ನು ಮಾಡುತ್ತಾರೆ. ಎಲ್ಲಾ ಕಡೆಗಳಲ್ಲೂ ಬೀಗ ಹಾಕುವುದಕ್ಕೆ ಹೋಗುತ್ತಾರೆ, ಇನ್ನೊಂದು ಕಡೆ ರನ್ ಆಫ್ ದಿ ರಿವರ್ ಸ್ಕೀಂನಲ್ಲಿ 2-3 ಮೆ.ವ್ಯಾ. ವಿದ್ಯುಚ್ಛಕ್ತಿ ಮಾಡಲು ಎಲ್ಲಿ ಸಬ್ ಮರ್ಷನ್ ಆಗುವಂತಹ ಸ್ಥಳ ಬರುತ್ತದೆ, ಅಲ್ಲೂ ಈ ರೀತಿಯಾಗಿ ಮಾಡುತ್ತಾರೆ. ಇದಕ್ಕೆ ನೀತಿ ಏನು ಎಂಬುದನ್ನು ನೀವೇ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ: ನಾವು ಅದನ್ನು ವಿರೋಧ ಮಾಡುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಸ್ಪಷ್ಟವಾದಂತಹ ಕಾರಣವಿದೆ.

ಶ್ರೀ ಎಂ.ಸಿ.ನಾಣಯ್ಯ: ದಯಮಾಡಿ ತಾವು ನಾನು ಹೇಳುವುದನ್ನು ಕೇಳಿ ನಂತರ ತಾವು ಮಾತನಾಡಿ. ಇವತ್ತು ಡೆವಲಪ್‌ಮೆಂಟ್ ಆಗಬೇಕು, ವಿದ್ಯುಚ್ಛಕ್ತಿ ಬೇಕು. ಮಿನಿ ಹೈಡಲ್ ಪ್ರಾಜೆಕ್ಟ್‌ನಲ್ಲಿ, ರನ್ ಆಫ್ ದಿ ರಿವರ್ ಸ್ಕೀಂನಲ್ಲಿ 25-30 ನದಿಗಳನ್ನು ಈಗಾಗಲೇ ಐಡೆಂಟಿಫೈ ಮಾಡಿದ್ದಾರೆ. ವಿದ್ಯುತ್ತನ್ನು ಥರ್ಮಲ್‌ನಿಂದ ಮಾಡುವುದಕ್ಕೆ ಹೋದರೆ ಪರಿಸರ ನಾಶವಾಗುತ್ತದೆ, ಇನ್ನೊಂದು ಕಡೆ ಹೈಡಲ್ ಪ್ರಾಜೆಕ್ಟ್ ಇದನ್ನು ದೊಡ್ಡದಾಗಿ ಮಾಡುವುದಕ್ಕಾಗುವುದಿಲ್ಲ. ಬೇಡ್ತಿ ಯೋಜನೆಯನ್ನು ಚಾಲೂ ಮಾಡಿದ್ದಾರೆ. ಬೇಡ್ತಿ ಯೋಜನೆಯಲ್ಲಿ 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಅದು ಆದರೆ ಸಬ್‌ಮರ್ಷನ್ ಆಗುತ್ತದೆ. ಆದರೆ ರನ್ ಆಫ್ ದಿ ರಿವರ್ ಸ್ಕೀಂನಲ್ಲಿ ಸರ್ವೆ ಮಾಡುವುದಕ್ಕೆ ಬಿಡುವುದಿಲ್ಲವೆಂದರೆ ವಿದ್ಯುಚ್ಛಕ್ತಿಯನ್ನು ಹೇಗೆ ಪಡೆಯುವುದು? ವಿದ್ಯುತ್ ಇಲ್ಲವೆಂದರೆ ಪ್ರತಿಭಟನೆಯನ್ನು ಮಾಡುತ್ತಾರೆ. ಈ ರೀತಿಯಾದರೆ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಮಾಡುವುದಾದರೂ ಎಲ್ಲಿ? ನೀವೆ ಎಲ್ಲಿಂದಲಾದರೂ ವಿದ್ಯುತ್ ಅನ್ನು ಕೊಡಿ ಅದಕ್ಕೆ ಸರ್ಕಾರದವರು ಹಣವನ್ನು ಕೊಡುವುದಕ್ಕೆ ತಯಾರು ಇದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ಅಭಿವೃದ್ಧಿಯಾಗಬೇಕೆನ್ನುವುದರಲ್ಲಿ ನಮ್ಮದು ಯಾವುದೂ ವಿರೋಧವಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಮಲೆನಾಡನ್ನು ಮುಳುಗಿಸಿ ವಿದ್ಯುತ್ ಡೆವಲಪ್‌ಮೆಂಟ್ ಮಾಡುವಂಥಾದ್ದು ಅಲ್ಲ. ಪ್ರಾಕೃತಿಕ ಸಂಪತ್ತನ್ನು ಕೋಟಿಗಟ್ಟಲೆ

ಮುಳುಗಿಸಿ ವಿದ್ಯುಚ್ಛಕ್ತಿಯನ್ನು ಮಾಡಿದರೆ ಅದಕ್ಕೆ ಏನು ಅರ್ಥ ಇದೆ?

ಉಪಾಧ್ಯಕ್ಷರು: ತಾವು ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ.

ವಿಷಯ: ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ.

206 (1323)

ಶ್ರೀ ಶಿವಣ್ಣ (ತುಮಕೂರು): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವನ್ನು ನಿಗಧಿತ ಅವಧಿಯಲ್ಲಿ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ತುಮಕೂರು ವಿಭಾಗದಲ್ಲಿರುವ ಇಂತಹ ಪ್ರಕರಣಗಳೆಷ್ಟು, ಹಾಗೂ ಇದರ ಮೊತ್ತವೆಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಅವಾರ್ಡ್ ಪಾಸ್ ಆದ ನಂತರ ಆಯಾ ವರ್ಷದ ಅನುದಾನದಲ್ಲಿ ಭೂ ಸ್ವಾಧೀನಕ್ಕಾಗಿ ನಿಗಧಿಗೊಳಿಸಿದ ಅನುದಾನಕ್ಕೆ ಅನುಗುಣವಾಗಿ ಪರಿಹಾರವನ್ನು ಪಾವತಿಸಲಾಗುತ್ತಿದೆ.

ಆ) ಹೇಮಾವತಿ ನಾಲೆವಲಯ ತುಮಕೂರಿನ ವ್ಯಾಪ್ತಿಯಲ್ಲಿ ದಿನಾಂಕ 31-3-98ಕ್ಕೆ ಭೂ ಸ್ವಾಧೀನ ಪರಿಹಾರ ಪಾವತಿಸುವಂತಹ ಪ್ರಕರಣಗಳು 2073 ಇದ್ದು, ಪಾವತಿಸಬೇಕಿರುವ ಪರಿಹಾರದ ಮೊತ್ತ ರೂ. 3,87,55,499-00 ಇದರಲ್ಲಿ ತುಮಕೂರು ವಿಭಾಗಕ್ಕೆ ಸಂಬಂಧಿಸಿದಂತೆ 371 ಪ್ರಕರಣಗಳು ಇದ್ದು ಪರಿಹಾರದ ಮೊತ್ತ ರೂ.40,34,450-00 ಇರುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಶ್ರೀ ಎಸ್.ಶಿವಣ್ಣನವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ತಾವು ಎಷ್ಟನೆ ವರ್ಷದಿಂದ 1998ರವರೆಗೆ ಇಷ್ಟು ಪರಿಹಾರವನ್ನು ಕೊಡಬೇಕಾಗಿದ್ದು ಬಾಕಿ ಇತ್ತು. ಇದರಲ್ಲಿ ಭಾಗಶಃ ಎಷ್ಟು ಜನರಿಗೆ ಪರಿಹಾರವನ್ನು ಕೊಟ್ಟಿದ್ದೀರಿ? ತಾವು ಭಾಗಶಃ ಎಷ್ಟು ಜನರಿಗೆ ಪರಿಹಾರವನ್ನು ಕೊಡಬೇಕೆಂದು ಆಲೋಚನೆಯನ್ನು ಮಾಡಿದ್ದೀರಿ? ನೀವು ಈ ಪರಿಹಾರವನ್ನು ಕೊಡುವುದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಡುವುದಕ್ಕೂ ಏನು ಸಂಬಂಧವೆಂದು